**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ</u>**

**<u>ಎಸ್.ಸಿ.ನಂಃ 201/ 2022</u>**

**ಚಾಸಾ-2 ಪ್ರಾಸಾ-4**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋವಿಂದ ಟಿ.ಎಂ |
| ತಂದೆಯ ಹೆಸರು | : | ಮಂಜಯ್ಯ |
| ವಯಸ್ಸು | : | 33 |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ತೇಜೂರು ಗ್ರಾಮ |

**<u>ದಿನಾಂಕಃ 27.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ ಅಭಿಯೋಜನೆಯ ಪರವಾಗಿಃ-</u>**

ಚಾಸಾ-1 ರಿಂದ 5 ಗೊತ್ತು. ನಾನು ಸಹಿ ಮಾಡುತ್ತೇನೆ. ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ಚಾಸಾ-1 ರವರು ಬಾಡಿಗೆ ಇದ್ದ ಮನೆಯ ಹತ್ತಿರ ಮಾಡಿರುತ್ತೇನೆ. ಸದರಿ ದಾಖಲೆ ಸ್ಥಳ ಮತ್ತ ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ದಿಃ 22.01.2022 ರಂದು ದ್ಯಾವಪ್ಪನ ಕೊಪ್ಪಲಿನಲ್ಲಿ ಚಾಸಾ-1 ರವರು ವಾಸವಾಗಿದ್ದಂತಹ ಬಾಡಿಗೆ ಮನೆಗೆ ಪೊಲೀಸರು ಮಹಜರ್ ಮಾಡಲು ಬಂದಾಗ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ಗಂಡ ಹೆಂಡತಿಯ ಜಗಳದ ವಿಚಾರವಾಗಿ ಪೊಲೀಸರು ಮಹಜರ್ ಮಾಡಲು ಬಂದಾಗ ನಾನು ಸಹಿ ಮಾಡಿದ್ದೆ. ಸ್ಥಳದಲ್ಲಿ ಫೋಟೋ ತೆಗೆದಿರುತ್ತಾರೆ. ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈಗ ತೋರಿಸುತ್ತಿರುವ ಫೋಟೋದಲ್ಲಿ ನಾನು, ಚಾಸಾ-1 ಮತ್ತು ಚಾಸಾ-3 ರವರು ಇರುತ್ತೇವೆ. ಸದರಿ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ನಿಪಿ-2 ನ್ನು ಜರುಗಿಸುವ ಕಾಲಕ್ಕೆ ಚಾಸಾ-1 ರವರು ನೀಡಿದ ಚಾಸಾ-1 ಮತ್ತು 1ನೇ ಆರೋಪಿಯ ಮದುವೆಯ ಆಮಂತ್ರಣ ಪತ್ರಿಕೆ ಮತ್ತು ಮದುವೆಯ ಎರಡು ಪೋಟೊಗಳನ್ನು ನೀಡಿದ್ದು, ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಸರಿ. ಸದರಿ ಆಮಂತ್ರಣ ಪತ್ರಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಮತ್ತು 2 ಮದುವೆಯ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-7 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆಪಾದಿತರ ಪರ ಶ್ರೀ ಎ ಜೆ ಆರ್ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀರಣಗೊಳಿಸಿ ಮುದ್ರಿಸಲಾಯಿತು.)**

ಓ ಹೇ ಕೇ ಸ ಇದೆ

(ರೂಪಾ ಆರ್. ಕುಲಕರ್ಣಿ)
**3** ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.